**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 05/2021**

ಪಿಡಬ್ಲ್ಯೂ-1

**ದಿನಾಂಕ 24-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟಿ ವಾಲು ಶ್ರೀ ಕೆ ವಿ ಎಮ್ 1ನೇ ಪ್ರತಿವಾದಿ ಪರ ವಕೀಲರು**

ನಮ್ಮ ತಾಯಿ ಮಲ್ಲಮ್ಮರವರನ್ನು ಯಾವ ವರ್ಷದಲ್ಲಿ ಮದುವೆ ಮಾಡಿ ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. ಚನ್ನಂಗೆರೆಯಲ್ಲಿ ನನ್ನ ತಂದೆ ಮತ್ತು ತಾತನ ಆಸ್ತಿ ಇರುವುದಿಲ್ಲ. ಚನ್ನಂಗೆರೆಯಲ್ಲಿ ನಮ್ಮ ತಾತ ಮತ್ತು ತಂದೆ ಆಸ್ತಿ ಇದೆ ಎಂದರೆ ಸರಿಯಲ್ಲ. ನಮ್ಮ ತಂಗಿಯನ್ನು ಹೊಸೂರು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದೇವೆ. ನಾನು ಚನ್ನಂಗೆರೆಯಲ್ಲಿ ವಾಸವಾಗಿದ್ದು ನನ್ನ ತಂಗಿ ಹೊಸೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರೂ ಸಹ ಕುಪ್ಪೆ ಗ್ರಾಮದಲ್ಲಿ ವಾಸವಾಗಿದ್ದಾರೆ. ನಮ್ಮ ತಾಯಿ ಮಲ್ಲಮ್ಮ ಮೃತ ಪಟ್ಟು 4-5 ವರ್ಷಗಳಾಗಿವೆ. ನನ್ನ ತಾಯಿ ಮೃತ ಪಡುವ ಮುಂಚೆ ನಮ್ಮ ಜೊತೆಗೆ ಕುಪ್ಪೆಯಲ್ಲಿ ವಾಸವಾಗಿದ್ದರು. ನಾವು ಮತ್ತು ಪ್ರತಿವಾದಿಗಳು ಪ್ರತ್ಯೇಕವಾಗಿ ಬೇರೆ ವಾಸವಾಗಿದ್ದೆವೆ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತವಾಗಿದ್ದಾಗ ನಾವು ಭಾಗವನ್ನು ಮಾಡಿಕೊಡಿ ಎಂದು ಕೇಳಿದ್ದು ಅವರು ಮಾಡಿಕೊಟ್ಟಿರುವುದಿಲ್ಲ. ನಮ್ಮ ತಾಯಿ 10-12 ವರ್ಷದ ಹಿಂದೆ ಭಾಗವನ್ನು ಕೇಳಿದ್ದರೂ ಸಹ ಅವರು ವಿಭಾಗ ಮಾಡಿಕೊಟ್ಟಿರುವುದಿಲ್ಲ. ನಮ್ಮ ತಾಯಿಯವರು ವಿಭಾಗಕ್ಕಾಗಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ನಾನು ಮತ್ತು ನನ್ನ ತಾಯಿ ಎಲ್ಲರೂ ಸಹ 10 ವರ್ಷಗಳ ಹಿಂದೆ ಮತ್ತು ಇತ್ತೀಚೆಗೆ ಕೇಳಿದ್ದರೂ ಸಹ ಅವರು ಭಾಗ ಮಾಡಿಕೊಟ್ಟಿರುವುದಿಲ್ಲ. ಆದರೆ, ನಾವು ಆ ಸಮಯದಲ್ಲಿ ದಾವೆ ಸಲ್ಲಿಸಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಮಹದೇವಮ್ಮರವರು ಹೆಸರಿನಲ್ಲಿ ಇದೆ. ಅದಕ್ಕೂ ಹಿಂದೆ ನಮ್ಮ ತಾತ ಚೆನ್ನ ಬಸವಯ್ಯರವರ ಹೆಸರಿನಲ್ಲಿ ಇತ್ತು. ಚೆನ್ನ ಬಸವಯ್ಯರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರು

ಪಡಿಸಿರುತ್ತೇನೆ. ನಾನು ನಮ್ಮ ತಾತ ಚೆನ್ನ ಬಸವಯ್ಯರವರ ಹೆಸರಿನಲ್ಲಿ ಇರುವ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಮ್ಮ ಅಜ್ಜಿ ಮಹದೇವಮ್ಮರವರ ಹೆಸರಿನಲ್ಲಿರುವ ದಾಖಲೆಗಳು ಈ ಹಿಂದೆ ಬಸವೇಶ್ವರ ದೇವಸ್ಥಾನದಲ್ಲಿ ಇತ್ತು ಎಂದರೆ ಸಾಕ್ಷಿ ಸದರಿ 30 ಗುಂಟೇ ಜಮೀನು ಬೇರೆ ಇದ್ದು, ಉಳಿದ 2 ಎಕರೆ 20 ಗುಂಟೆ ಜಮೀನು ನಮ್ಮ ಅಜ್ಜಿಯ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನಮ್ಮ ಅಜ್ಜಿ ಮಹದೇವಮ್ಮರವರು ಬಸವೇಶ್ವರ ದೇವಸ್ಥಾನದ ಪೂಜೆ ಕೆಲಸವನ್ನು ಮಾಡುತ್ತಿದ್ದರು ಎಂದರೆ ಎಲ್ಲರೂ ಒಟ್ಟಾಗಿ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಸದರಿ ಮಹದೇವಮ್ಮರವರು ಪೂಜೆ ಮಾಡುತ್ತಿದ್ದರಿಂದ ಸದರಿ ದೇವಸ್ಥಾನದ ಜಮೀನಿನಲ್ಲಿ ಮಹದೇವಮ್ಮರವರು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾವೆಲ್ಲರಾ ಒಟ್ಟಾಗಿ ಉಳುಮೆ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನಾವು ಕಂದಾಯ ಇಲಾಖೆಗೆ ನಮ್ಮ ಹೆಸರಿಗೆ ದಾಖಲೆಗಳನ್ನು ವರ್ಗಾಯಿಸಲು ಅರ್ಜಿ ನೀಡಿರುವುದಿಲ್ಲ, ಆದರೆ ನಾವೇ ಸ್ವಾದೀನದಲ್ಲಿ ಇದ್ದೆವು. ಮಹದೇವಮ್ಮರವರು ದೇವಸ್ಥಾನದ ಕೆಲಸ ಮಾಡುತ್ತಿದುದ್ದರಿಂದ ಅವರ ಹೆಸರಿಗೆ ದೇವಸ್ಥಾನದ ಜಮೀನನ್ನು ಮಾಡಿಕೊಡಿ ಎಂದು ಜಿಲ್ಲಾಧಿಕಾರಿಗಳಿಗೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ಪುರಸ್ಕರಿಸಿ ಮೈಸೂರ ಜಿಲ್ಲಾಧಿಕಾರಿಗಳು ದಾವಾ ಸ್ವತ್ತನ್ನು ಮಹದೇವಮ್ಮರವರ ಹೆಸರಿಗೆ ವರ್ಗಾಯಿಸಲು ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಮಹದೇವಮ್ಮರವರು ತಮ್ಮ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಚೆನ್ನ ಬಸವಯ್ಯ ಮೃತ ಪಟ್ಟ ನಂತರ ಮಹದೇವಮ್ಮ ಖಾತೆ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

ಮಹದೇವಮ್ಮ ಯಾವಾಗ ಮೃತಪಟ್ಟಿದ್ದಾರೆ ಎಂದು ನಿರ್ದಿಷ್ಟ ದಿನಾಂಕ ಗೊತ್ತಿಲ್ಲ, ಆದರೆ 15 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ನಮ್ಮ ಅಜ್ಜಿ ಮಹದೇವಮ್ಮರವರಿಗೆ ನಮ್ಮ ತಾಯಿ ಮಲ್ಲಮ, ನಾಗರತ್ನಮ್ಮ ಮತ್ತು ಶೀಲ ಮೂರು ಜನ ಹೆಣ್ಣು ಮಕ್ಕಳನ್ನು ಬಿಟ್ಟು ಬೇರೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ಮಹದೇವಮ್ಮರವರಿಗೆ ಮಕ್ಕಳು ಇಲ್ಲದ ಕಾರಣ ನಾಗರತ್ನರವರ ಮಗ ಪರಶಿವಮೂರ್ತಿರವರನ್ನು ದಿನಾಂಕ 20.05.1994 ರಂದು ದತ್ತು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದತ್ತು ಪಡೆದಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ

ತಾತ ಚೆನ್ನ ಬಸವಯ್ಯರವರು ಯಾವಾಗ ಮೃತ ಪಟ್ಟಿದ್ದಾರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜಿ ಮೃತ ಪಟ್ಟ ನಂತರ ಬಸವೇಶ್ವರ ದೇವಸ್ಥಾನದ ಆಸ್ತಿಯನ್ನು ಮತ್ತು ದಾವಾ ಸ್ವತ್ತನ್ನು ಪರಶಿವ ಮೂರ್ತಿರವರು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಎಲ್ಲರೂ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಸರ್ವೆ ನಂಬರ್ 47 ರಲ್ಲಿ 3 ಜನ ಮಕ್ಕಳು 30 ವರ್ಷಗಳಿಂದ ಉಳುಮೆ ಮಾಡುತ್ತಿದ್ದೇವೆ. ನಾವು ದಾವಾ ಸ್ವತ್ತು ಮತ್ತು ದೇವಸ್ಥಾನಕ್ಕೆ ಬಿಟ್ಟ 30 ಗುಂಟೆಯನ್ನು ಸಹ ಒಟ್ಟಿಗೆ ಉಳುಮೆ ಮಾಡುತ್ತಿದ್ದೇವೆ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ